# ಸಮ್ಮೇಳನಾಧ್ಯಕ್ಷರ ಭಾಷಣಗಳ ತಾತ್ವಿಕ ಸ್ವರೂಪ

**ನಾಗಪ್ಪ**

ಕನ್ನಡ ಉಪನ್ಯಾಸಕರು, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ.

DOI: https://doi.org/10.5281/zenodo.17486958

## ABSTRACT:

ಕನ್ನಡ ಸಾಹಿತ್ಯ ಪರಿಷತ್ತು ಈ ನಾಡಿನ ಸರ್ಕಾರೇತರ, ಸಾರ್ವಜನಿಕ ಹಿತದ ಹಿರಿಯ ಸಂಸ್ಥೆ. ನಮ್ಮ ಪ್ರಾತಿನಿಧಿಕ ಸಂಸ್ಥೆಯೂ ಹೌದು. ಕನ್ನಡದ ಕೆಲಸಗಳನ್ನು ಮಾಡಬೇಕೆಂಬ ಒತ್ತಾಸೆಯಿಂದ ಆರಂಭವಾಗಿದೆ. 1915 ರಲ್ಲಿ ಆರಂಭಗೊಂಡಂತಹ ಕನ್ನಡ ಸಾಹಿತ್ಯ ಪರಿಷತ್ತು ಭಾಷೆ, ನಾಡು, ನುಡಿ ಅಭಿವೃದ್ಧಿಯ ಬಗ್ಗೆ ಹಲವಾರು ಕಾರ್ಯ ಯೋಜನೆಗಳನ್ನು ಹಾಕಿಕೊಂಡಿದೆ. ಯಾವ ವಿಶ್ವವಿದ್ಯಾಲಯವು ಮಾಡದ ಬೃಹತ್ ಪ್ರಮಾಣದ ನಿಘಂಟನ್ನು ಒಂಬತ್ತು ಸಂಪುಟಗಳಲ್ಲಿ ಹೊರ ತಂದಿದೆ. ಕನ್ನಡ ನಾಡು ನುಡಿಗೆ ಪೂರಕವಾದ ಗ್ರಂಥಗಳನ್ನು ಪ್ರಕಟಿಸಿದೆ. ಜೊತೆಗೆ ಅಖಿಲ ಭಾರತ ಸಮ್ಮೇಳನಗಳನ್ನು ಹಮ್ಮಿಕೊಂಡು ಬಂದಿದೆ. ಪ್ರಮುಖವಾದವು ಕನ್ನಡ ಸಾಹಿತ್ಯ ಸಮ್ಮೇಳನಗಳು. ಇಂದಿಗೂ ಸಾರ್ವಜನಿಕ ಜೀವನದಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ನಾಡು ನುಡಿಯ ಬಗ್ಗೆ ಅವುಗಳ ಅಭಿವೃದ್ಧಿಯ ಬಗ್ಗೆ ಹಲವಾರು ವಿಷಯಗಳನ್ನು ಸಾಹಿತ್ಯ ಸಮ್ಮೇಳನಗಳಲ್ಲಿ ಚರ್ಚಿತವಾಗಿವೆ ಮತ್ತು ಚರ್ಚಿತವಾಗುತ್ತಿವೆ.

ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಐತಿಹಾಸಿಕ ಚರ್ಚೆಗಳು ನಡೆಯುತ್ತವೆ. ಅದರಲ್ಲೂ ಮುಖ್ಯವಾಗಿ ಅಧ್ಯಕ್ಷೀಯ ಭಾಷಣ ಪ್ರಮುಖವಾಗಿರುತ್ತದೆ. ಈ ಅಧ್ಯಕ್ಷೀಯ ಭಾಷಣಗಳನ್ನು ಅವುಗಳ ಕಾಲದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಒತ್ತಡಗಳ ಹಿನ್ನೆಲೆಯಲ್ಲಿಯೂ ಗಮನಿಸಬೇಕಾಗಿದೆ. ಏಕೆಂದರೆ ಅಂದಿನ ಒತ್ತಡಗಳು ಸಹ ಈ ಭಾಷಣಗಳ ಮೂಲಕ ವ್ಯಕ್ತಗೊಂಡಿವೆ. ಇಲ್ಲಿ ಶಿಕ್ಷಣ ಮಾಧ್ಯಮ, ಕನ್ನಡ ಮಾಧ್ಯಮದ ಸವಾಲುಗಳು, ಕನ್ನಡ ಉಳಿಯುವ, ಬೆಳೆಯುವ ಚಿಂತನೆಗಳು, ಕನ್ನಡ ಭಾಷೆಯ ಸವಾಲುಗಳು, ಗಡಿ ಸಮಸ್ಯೆಗಳು, ಕನ್ನಡ ಪರ ಚಿಂತನೆಗಳು, ಹಿಂದಿ ಹೇರಿಕೆ, ಭಾಷಾ ಅಭಿವೃದ್ಧಿ, ಕನ್ನಡ ಭಾಷಾ ಬಳಕೆ, ಭಾಷಾ ರಚನೆ, ಸಾರ್ವಜನಿಕ ಜೀವನದಲ್ಲಿ ಭಾಷೆ, ಆಡಳಿತದಲ್ಲಿ ಭಾಷೆ, ಕನ್ನಡ ನಿಘಂಟುಗಳ ರಚನೆ, ಭಾಷಿಕ ಅಂಶಗಳನ್ನು ಕುರಿತು ಅಧ್ಯಕ್ಷೀಯ ಭಾಷಣಗಳಲ್ಲಿ ಚರ್ಚೆ ಮಾಡಲಾಗಿದೆ.

## KEYWORDS:

ಸಾಹಿತ್ಯ ಪರಿಷತ್ತು, ಭಾಷಣಗಳು, ತಾತ್ವಿಕತೆ, ನಾಡು-ನುಡಿ, ಸಮ್ಮೇಳನಗಳು, ಸಮ್ಮೇಳನಾಧ್ಯಕ್ಷರು, ಅಧ್ಯಕ್ಷೀಯ ಭಾಷಣ.

ಸಾಹಿತ್ಯ ಸಮ್ಮೇಳನಗಳು ಸಾಮಾನ್ಯವಾಗಿ ನಾಡಿನ ಒಳಭಾಗ ಮತ್ತು ಮದ್ರಾಸ್, ಮುಂಬಯಿನಂತಹ ಹೊರನಾಡುಗಳಲ್ಲಿ ಗಡಿಭಾಗಗಳಾದ ಕೊಡಗು, ಬೆಳಗಾವಿ, ರಾಯಚೂರು, ಬೆಂಗಳೂರು, ಬಳ್ಳಾರಿಯಲ್ಲಿ ಜರಗುತ್ತಾ ಬಂದಿವೆ. ಈ ಸಂದರ್ಭದಲ್ಲಿ ಆಯಾ ಭಾಗದಲ್ಲಿ ಭಾಷೆಯ ಸಮಸ್ಯೆಗಳನ್ನು ಅಧ್ಯಕ್ಷೀಯ ಭಾಷಣಗಳಲ್ಲಿ ಸಮ್ಮೇಳನಾಧ್ಯಕ್ಷರು ಗಮನಕ್ಕೆ ತಂದು ಕನ್ನಡ ಭಾಷೆಯ ಬಗ್ಗೆ ಜಾಗೃತಿಯನ್ನು ಹುಟ್ಟಿಸುವುದಕ್ಕೆ ಪರಿಷತ್ತು ಪ್ರಚಾರಕರನ್ನು ನೇಮಿಸಬೇಕೆಂದು ಅಧ್ಯಕ್ಷರು ಮನವಿ ಮಾಡಿದ್ದಾರೆ. ಭಾಷಾ ಜಾಗೃತಿಯನ್ನುಂಟು ಮಾಡಲು ಗಡಿಭಾಗಗಳಲ್ಲಿ ಕನ್ನಡ ವಾಚನಾಲಯಗಳನ್ನು, ಕನ್ನಡ ಪುಸ್ತಕಾಲಯಗಳನ್ನು ಸ್ಥಾಪಿಸಲು ಪರಿಷತ್ತಿಗೆ ಜನತೆಯ ಪರವಾಗಿ ಮನವಿ ಸಲ್ಲಿಸಿದ್ದಾರೆ.

ಈ ಭಾಷಾವಾರು ಭೇದಭಾವನೆ ನಮ್ಮ ರಾಜಕೀಯದ ದುಷ್ಪತನ. ಅಖಂಡ ಭಾರತದ ನಿರ್ಮಾಣಕ್ಕೆ ನಮ್ಮ ನಮ್ಮ ಪ್ರಾಂತೀಯ ದ್ವೇಷ ದಮನವಾಗಬೇಕು. ಕನ್ನಡಕ್ಕೆ ಅಣ್ಣ ತಮ್ಮ ಎಲ್ಲವೂ ದ್ರಾವಿಡ ಭಾಷೆಯೇ. ಒಂದು ಅಕ್ಷರ ಬದಲಾದರೆ ಕನ್ನಡ ಶಬ್ದ ತೆಲುಗು ಶಬ್ದವಾಯಿತು. ಇನ್ನೊಂದು ಅಕ್ಷರ ಬದಲಾದರೆ ತಮಿಳಾಯಿತು. ಕನ್ನಡ ತೆಲುಗುಗಳಿಗೆ ಬೇರೆ ಬೇರೆ ಲಿಪಿಗಳಿಲ್ಲ. ಎರಡೂ ಒಂದೇ ಎಂದು. ಇಂತಹ ಸಮಸ್ಯೆಗಳಿಗೆ ಯಾವ ರೀತಿಯ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷೀಯ ಭಾಷಣಗಳಲ್ಲಿ ಭಾಷೆಯನ್ನು ಕುರಿತಾಗಿ, ಅದರ ಉಗಮದ ಬಗ್ಗೆ, ಅದರ ಪ್ರಾಚೀನತೆ ಬಗ್ಗೆ, ಬೇರೆ–ಬೇರೆ ಭಾಷೆಗಳೊಂದಿಗೆ ಸಂಬಂಧದ ಬಗ್ಗೆ ಹಲವಾರು ಅಂಶಗಳನ್ನು ಚರ್ಚೆ ಮಾಡಿದ್ದಾರೆ.

ಈ ಮೂಲಕ ನೋಡುವುದಾದರೆ ಕನ್ನಡ ಭಾಷೆಯ ಬಗೆಗಿನ ಅವರ ನಿಲುವುಗಳೇನಿದ್ದವು? ಭಾಷೆಯ ಬೆಳವಣಿಗೆಗೆ ಅವರು ನೀಡಿದ ಸೂಚನೆ ಸಲಹೆಗಳೇನು? ನಿರ್ಧಾರಗಳೇನು? ಅವು ಕನ್ನಡದ ಬೆಳವಣಿಗೆಗೆ ಹೇಗೆ ಹೊಸ ಆಯಾಮವನ್ನು ಒದಗಿಸುತ್ತವೆ? ಸಮ್ಮೇಳನಗಳಲ್ಲಿ ಎಲ್ಲಾ ಕಾರ್ಯಕ್ರಮಗಳ ಪೈಕಿ ಸಮ್ಮೇಳನಾಧ್ಯಕ್ಷರ ಭಾಷಣಕ್ಕೆ ಮತ್ತು ಸಮ್ಮೇಳನದ ಬಹಿರಂಗ ಸಭೆಯಲ್ಲಿ ಕೈಗೊಳ್ಳುವ ನಿರ್ಣಯಗಳಿಗೆ ತುಂಬಾ ಪ್ರಾಶಸ್ತ್ಯವಿದೆ. ನಾಡು–ನುಡಿ, ಗಡಿ, ಶಿಕ್ಷಣ, ಮಾಧ್ಯಮ, ಇತಿಹಾಸ, ಭಾಷೆ, ಆಡಳಿತ ಮೊದಲಾದ ನಾನಾ ವಿಷಯಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಮಾಡಬೇಕಾದ ಕಾರ್ಯಗಳ ಕುರಿತು ವಿಚಾರಗಳನ್ನು, ಸಲಹೆ ಸೂಚನೆಗಳನ್ನು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಸಾಹಿತ್ಯ ಸಮ್ಮೇಳನಗಳಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣಕ್ಕೆ ತುಂಬ ಮಹತ್ವದ ಸ್ಥಾನವಿದೆ. ಕೆಲವು ಅಧ್ಯಕ್ಷರು ನೂರು ಪುಟಗಳವರೆಗೂ ಭಾಷಣ ಮಂಡಿಸಿದ್ದಾರೆ. ಇನ್ನು ಕೆಲವರು ಮೂರು ನಾಲ್ಕು ಪುಟಗಳಿಗೆ ಸೀಮಿತಗೊಳಿಸಿದ್ದಾರೆ. ಈ ಎಲ್ಲಾ ಭಾಷಣಗಳನ್ನು ಸಿಂಹಾವಲೋಕನ ಮಾಡಿದಾಗ, ಕನ್ನಡ ಹಿಂದಿನ–ಇಂದಿನ ಸಾಹಿತ್ಯ,

ಕರ್ನಾಟಕದ ಭವ್ಯ ಇತಿಹಾಸ, ಸಂಸ್ಕೃತಿ, ಭಾಷೆ, ಪರಂಪರೆ ತಿಳಿದುಬರುವುದರೊಂದಿಗೆ, ಕನ್ನಡ ನಾಡು ನುಡಿಯ ಉಳಿವು ಮತ್ತು ಬೆಳವಣಿಗೆಗೆ ಹೇಗೆ ಸಮ್ಮೇಳನಾಧ್ಯಕ್ಷರು ಪ್ರತಿಕ್ರಿಯಿಸಿದ್ದಾರೆ ಎನ್ನುವುದು ತಿಳಿದುಬರುತ್ತದೆ.

ಇದು ಕನ್ನಡದ ಹಬ್ಬ, ಜಾತ್ರೆ, ಸಂತೆ, ಉತ್ಸವ, ಮೆರವಣಿಗೆ, ಸಾಂಸ್ಕೃತಿಕ ಚಿಂತನ, ರಾಜಕೀಯ ವೈಭವ, ಸಾಹಿತ್ಯಗಳ ಪರಿಷೆ ಏನೆಲ್ಲವೂ ಹೌದು ಮತ್ತು ಅಲ್ಲ. ಹೌದು ಮತ್ತು ಅಲ್ಲ ಎಂಬ ಎರಡೂ ವಿರೋಧಿ ನೆಲೆಯ ಶಬ್ದಗಳನ್ನು ಏಕಕಾಲಕ್ಕೆ ಬಳಸುವ ಮೂಲಕ ವರ್ತಮಾನದ ಸಂಕೀರ್ಣಾತಿ ಸಂಕೀರ್ಣ ಬದುಕಿನ ದಿಗ್ದರ್ಶನ ಮಾಡಿಸುವ ಪ್ರಯತ್ನಕ್ಕಿಳಿಯಲಾಗಿದೆ.

ಕನ್ನಡ ನುಡಿ ಚಿಂತನೆ ಕರ್ನಾಟಕದ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿರುವವರ ಬಾಳ್ವೆಯ ಪ್ರಶ್ನೆ ಮಾತ್ರವಲ್ಲ. ಕನ್ನಡ ಮಾತನಾಡುವವರು ಎಲ್ಲೆಲ್ಲಿ ವಾಸಿಸುತ್ತಿರುವರೋ ಅವರೆಲ್ಲರೂ ಹಿಡಿ ನೆಮ್ಮದಿಯಿಂದ ಬದುಕುವಂಥ ವಾತವರಣ ಕಲ್ಪಿಸುವ ರಾಜಕೀಯ ಇಚ್ಛಾಶಕ್ತಿಯ ಚರ್ಚೆಗೂ ಇದರ ಅರ್ಥವನ್ನು ವಿಸ್ತರಿಸಿಕೊಂಡಿದೆ.

ದೀರ್ಘ ಇತಿಹಾಸವುಳ್ಳ ಈ ಸಮ್ಮೇಳನಗಳ ಹಿಂದಿನ ಅಧ್ಯಕ್ಷರ ಹೆಸರುಗಳನ್ನು ನೋಡಿದಾಗ ಅವರೆಲ್ಲ ಕನ್ನಡ ನಾಡು ನುಡಿಗಳನ್ನು ಕಟ್ಟಿ ಬೆಳೆಸಲು ಶ್ರಮಿಸಿದವರು. ಸದಾ ಆ ಬೆಳವಣಿಗೆಯ ಬಗೆಗೆ ಚಿಂತಿಸಿದವರು. ಕನ್ನಡ ನುಡಿ ಮತ್ತು ನಾಡಿನ ಏಳ್ಗೆಗಾಗಿ ಪ್ರತಿಯೊಬ್ಬ ಸಮ್ಮೇಳನಾಧ್ಯಕ್ಷರೂ ತಮ್ಮ ಒಳನೋಟಗಳಿಂದ ಕೂಡಿದ ವಿಶ್ಲೇಷಣೆಗಳನ್ನು ಮುಂದಿಟ್ಟಿದ್ದಾರೆ. ಒಳನೋಟ, ವಿಶ್ಲೇಷಣೆ, ಚಿಂತನೆಗಳಿಗೆ ಕರ್ನಾಟಕದಲ್ಲಿ ಯಾವತ್ತೂ ಕೊರತೆ ಇಲ್ಲ. ಕೊರತೆ ಇರುವುದು ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದ ರಾಜಕೀಯ ಸಂಕಲ್ಪಶಕ್ತಿಯಲ್ಲಿ. ನಾಡು ನುಡಿಗಳ ಹಿತರಕ್ಷಣೆ ಮತ್ತು ಬೆಳವಣಿಗೆಗಳ ಬಗೆಗೆ ನೆರೆರಾಜ್ಯಗಳ ಜನರಿಗಿರುವಷ್ಟು ಸ್ಪಷ್ಟ ಪ್ರಜ್ಞೆ ಕನ್ನಡಿಗರಿಗಿಲ್ಲ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.

ನೂರು ವರ್ಷಗಳ ಹಿಂದೆ ನಮ್ಮ ನಾಡಿನ ಹಿರಿಯರು ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದಾಗ ತಮ್ಮ ಮುಂದೆ ಎರಡು ಗುರಿಗಳನ್ನು ಇಟ್ಟುಕೊಂಡಿದ್ದರು. 1. ಕನ್ನಡ ನುಡಿ ಬೆಳೆಯಬೇಕು, ಕನ್ನಡ ಸಾಹಿತ್ಯ ಬೆಳೆಯಬೇಕು, ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಮುಂದುವರಿಯಬೇಕು; 2.ಭಾರತವು ಸ್ವಾತಂತ್ರ್ಯವಾಗಬೇಕು. ಭಾರತ ಸ್ವಾತಂತ್ರ್ಯವಾದ ಹೊರತು ಕರ್ನಾಟಕ ಏಕೀಕರಣ ಸಾಧ್ಯವಾಗದು ಎಂಬುದನ್ನು ಅಂದಿನ ಹಿರಿಯರು ತಿಳಿದಿದ್ದರು. ಆ ಸ್ವಾತಂತ್ರ್ಯ ಬರುವವರೆಗೂ ಏಕೀಕರಣದ ಪ್ರಯತ್ನಗಳನ್ನು ಮಾಡುತ್ತಲೇ ಇರಬೇಕೆಂದು, ಕನ್ನಡದ ಮೂಲಕವಾಗಿ ಎರಡನ್ನೂ ಏಕಕಾಲದಲ್ಲಿ ನಡೆಸಿಕೊಂಡು ಹೋದರು. ಅವರ ತಪಸ್ಸಿನ ಫಲವಾಗಿ, ಅವರಿಗೆ ವಿಧೇಯರಾಗಿ ನಡೆದವರ ಪ್ರಯತ್ನಗಳ ಪರಿಣಾಮವಾಗಿ, 1947ರಲ್ಲಿ ಭಾರತ ಸ್ವಾತಂತ್ರ್ಯವಾಯಿತು. ಅದರ ತರುವಾಯ ಕರ್ನಾಟಕ ಒಂದಾಯಿತು. ಆದರೆ, ದೇಶ

ಸ್ವಾತಂತ್ರ್ಯವಾದ್ದರಿಂದ ದೇಶದ ಜನರಿಗೆ ಏನು ಬಂತು? ಕನ್ನಡ ನಾಡು ಒಂದಾಗಿದ್ದರಿಂದ ಕನ್ನಡಿಗರಿಗೆ ಏನು ಬಂತು? ಎಂಬುದರ ಕುರಿತು ಸಮ್ಮೇಳನಾಧ್ಯಕ್ಷರ ಭಾಷಣಗಳು ಬೆಳಕು ಚೆಲ್ಲಿವೆ.

ಕನ್ನಡ ಸಾಹಿತ್ಯ ಸಮ್ಮೇಳನವಾಗಿದೆಯಷ್ಟೇ, ಈ ಹಿಂದಿನ ಎಂಬತ್ತೆಂಟು ಸಮ್ಮೇಳನಗಳ ಅಧ್ಯಕ್ಷ ಪದವಿಯನ್ನು ವಹಿಸಿದ ಮಹಾನುಭಾವರ ಸಾಹಿತ್ಯಾಭ್ಯಾಸ, ಸಿದ್ಧಿಗಳನ್ನು ಸ್ಮರಿಸಿಕೊಂಡರೆ ಯಾರಿಗಾದರೂ ರೋಮಾಂಚನವಾಗದೆ ಇರದು. ಅವರ ನಾಡು, ನುಡಿಗಳ ಭಕ್ತಿ, ಅವರು ಸಲ್ಲಿಸಿದ ಸೇವೆ, ಅವರು ನಿರ್ಮಿಸಿದ ಕೃತಿಗಳು, ಅವರು ಕಂಡ ಕನಸುಗಳು, ಕೈಗೊಂಡ ಯೋಜನೆಗಳು, ಇವೆಲ್ಲ ಇಂದಿಗೂ ಕನ್ನಡ ಕಾರ್ಯಕರ್ತರಿಗೆ ಸ್ಫೂರ್ತಿಯನ್ನು ನೀಡುವಂತವುಗಳಾಗಿವೆ. ಕನ್ನಡ ನಾಡಿನ ಏಕೀಕರಣ, ವಿಶಾಲ ಕರ್ನಾಟಕದ ನಿರ್ಮಾಣ, ಬೇರೆ ಬೇರೆ ಪ್ರದೇಶಗಳ ಕನ್ನಡಿಗರಲ್ಲಿ ಪರಸ್ಪರ ಸೌಹಾರ್ದಭಾವನೆ, ಎಲ್ಲ ಸೀಮೆಗಳಿಗೂ ಸಮಾನವಾದ ಗ್ರಾಂಥಿಕ ವ್ಯವಹಾರ ಭಾಷೆಯ ನಿರ್ಮಾಣ, ಕನ್ನಡದ ಸ್ಥಾನಮಾನ ವಿಚಾರ, ಹಳೆಯ ಸಾಹಿತ್ಯದ ಸಂರಕ್ಷಣ, ಪ್ರಕಟಣೆ-ಪ್ರಸಾರಗಳು, ಜನತೆಗೆ ಒಳ್ಳೆಯ ಸಾಹಿತ್ಯವನ್ನು ನೀಡುವಿಕೆ, ಹೊಸ ಸಾಹಿತ್ಯಕ್ಕೆ ಪ್ರೋತ್ಸಾಹ, ಕನ್ನಡ ಭಾಷಾಭ್ಯಾಸದ ಬೆಳವಣಿಗೆ, ಭಾಷಾ ಶಾಸ್ತ್ರದ ತೌಲನಿಕ ಅಭ್ಯಾಸ, ಪ್ರಬುದ್ಧ ಪಾಂಡಿತ್ಯದ ಸಮೃದ್ಧಿ, ಕನ್ನಡ ನಾಡಿನ ರಾಜಕೀಯ ಸಾಮಾಜಿಕ-ಧಾರ್ಮಿಕ ಇತಿಹಾಸಗಳ ಲೇಖನ, ಅದಕ್ಕಾಗಿ ನಡೆಯಬೇಕಾದ ಸಂಶೋಧನೆ, ವಿಶ್ವಕೋಶದ ರಚನೆ, ಸಮೃದ್ಧವೂ ಸುಪುಷ್ಟವೂ ಆದ ಸಂಪನ್ನ ಶಬ್ದಕೋಶದ ನಿರ್ಮಾಣ, ವೈಜ್ಞಾನಿಕ ಗ್ರಂಥಗಳ ರಚನೆಗೆ ಪ್ರೋತ್ಸಾಹ, ಸಾಹಿತಿಗಳಿಗೆ ಸನ್ಮಾನ ಗೌರವಗಳು, ಸಮಾಜದಲ್ಲಿ ರಸಿಕತೆ, ಸಾಹಿತ್ಯ ಪ್ರೇಮಗಳ ಬೆಳವಣಿಗೆ ಹೀಗೆ ಹಲವಾರು ವಿಚಾರಗಳನ್ನು ಚರ್ಚೆ ಮಾಡುತ್ತಾರೆ.

ಕನ್ನಡ ನಾಡನ್ನು ಕಟ್ಟಲು ಹೆಣಗಾಡಬೇಕು, ಅಧ್ಯಕ್ಷನೆಂದರೆ ಕೇವಲ ವ್ಯಕ್ತಿಯಲ್ಲ. ಸಮ್ಮೇಳನದ ಮುಖ, ಪರಿಷತ್ತಿನ ಮುಖ, ಕನ್ನಡ ಜನಪದದ ಮಹಾಮುಖ. ಕನ್ನಡ ನಾಡಿನ ಜನರು "ನಾಡನ್ನು ಕಟ್ಟಬೇಕು" ಎಂಬ ಸಂಕಲ್ಪ ಮೂಡಿ ಅನೇಕ ವರ್ಷಗಳಾದವು. ಆ ಸಂಕಲ್ಪ ಸಾಧನೆಯನ್ನು ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣಗಳ ಮೂಲಕ ಸಾಧಿಸಿದ್ದಾಗಿದೆ.

**ಸಮ್ಮೇಳನದ ಅರ್ಥ ಮತ್ತು ಉದ್ದೇಶ:**

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಇದು ಆರೇಳು ಲಕ್ಷ ಜನರ ಪ್ರಾತಿನಿಧಿಕ ಸಮಾವೇಶ. ಕನ್ನಡ ಸಮ್ಮೇಳನದಲ್ಲಿ 'ಅಖಿಲ' ಎಂಬ ಗುಣವಾಚಕ ಭಾರತಕ್ಕೂ ಕರ್ನಾಟಕಕ್ಕೂ ಅನ್ವಯಿಸುತ್ತದೆ. ಇದನ್ನು ಬಿಡಿಸಿ ಹೇಳುವುದಾದರೆ ಇದು 'ಅಖಿಲ ಭಾರತ ಮತ್ತು ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ' ಎಂದಾಗುತ್ತದೆ. ಈ ಸಮ್ಮೇಳನಾಧ್ಯಕ್ಷ ಅಖಿಲ ಭಾರತವನ್ನು, ಕರ್ನಾಟಕವನ್ನು, ಕನ್ನಡವನ್ನು, ಸಾಹಿತ್ಯ,

ಸಂಸ್ಕೃತಿ, ಧರ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಭಾರತಾಂತರ್ಗತ ಅಖಿಲ ಕರ್ನಾಟಕದ ಹಿತ, ರಕ್ಷಣೆ, ಅಭಿವೃದ್ಧಿ, ಕ್ಷೇಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುತ್ತಾರೆ. ಅಂದರೆ ಅಖಂಡ ಭಾರತದ ಹಿತಕ್ಕೆ ಧಕ್ಕೆ ಆಗದಂತೆ ಅಖಿಲ ಕರ್ನಾಟಕದ ಹಿತರಕ್ಷಣೆ ಕುರಿತು ಚರ್ಚೆ ಮಾಡುತ್ತಾರೆ.

**ಸಮ್ಮೇಳನಾಧ್ಯಕ್ಷರ ಭಾಷಣ:**

ಸಮ್ಮೇಳನ ಅಧ್ಯಕ್ಷರ ಭಾಷಣಗಳ ಸಮುಚ್ಚಯವೆಂದರೆ ಮೆಗಾ–ಧಾರವಾಹಿಯ ಎಪಿಸೋಡ್‌ಗಳಂತೆ ಅಂತ ಹೇಳಿದೆ. ಇಲ್ಲೂ ಒಂದು ವಿನ್ಯಾಸವಿದೆ, ಲಯವಿದೆ. ಏಕೀಕರಣದ ಪೂರ್ವದ ಭಾಷಣಗಳಲ್ಲಿ ಆ ಕಾಲಮಾನದ ಕಾಳಜಿಗಳು: ಸ್ವಾತಂತ್ರ್ಯ ಚಳುವಳಿ; ನಾಡು ಒಂದಾಗಬೇಕೆಂಬ ಹಂಬಲ; ಕನ್ನಡಕ್ಕೊಂದು 'ಅಸ್ಮಿತೆ' ಕಟ್ಟಿಕೊಡುವ ಪ್ರಯತ್ನ. ಏಕೀಕರಣೋತ್ತರದಲ್ಲಿ ಕಾಣುವುದು ಕೂಡ ಸಮಕಾಲೀನ ಬಿಂಬಗಳೇ. ಒಂದಾದ ನಾಡು ಎದುರಿಸತೊಡಗಿದ ಸವಾಲುಗಳ ಸರಪಳಿಯೇ ಇದೆ. 'ಭಾರತ ಜನನಿಯ ತನುಜಾತೆ'ಯಾಗಿ, ಒಕ್ಕೂಟದ ಭಾಗವಾಗಿ ಕರ್ನಾಟಕ ಎದುರುಗೊಂಡ ಬಿಕ್ಕಟ್ಟುಗಳ ಚರ್ಚೆಯೊಂದಿಗೆ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ, 'ಪ್ರಭು' ಪಟ್ಟಕ್ಕೇರಿದವರು 'ಪ್ರಜೆ'ಗಳ ಮೇಲೆ ಮಾಡುವ ದಬ್ಬಾಳಿಕೆಗಳ ಚಿತ್ರವೂ ಇದೆ. ನಾವೀಗ ಆತಂಕದಿಂದ ಬಳಸುವ 'ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ, ವೈಚಾರಿಕತೆಯ ಕೊಲೆ' ಇತ್ಯಾದಿ ಪದಪುಂಜಗಳ ಸ್ವಾತಂತ್ರ್ಯೋತ್ತರ ಅವಧಿಯ ಪ್ರಭುತ್ವಗಳ ನಿಘಂಟಿನಲ್ಲಿ ಮೊದಲಿನಿಂದಲೂ ಇವೆ. 1970ರ ದಶಕದ ತುರ್ತು ಪರಿಸ್ಥಿತಿ ಇದೆಲ್ಲದರ ಒಂದು ಸ್ಥೂಲ ಬಿಂದು. ಇದೆಲ್ಲವನ್ನು ಎದುರಿಸುವ ಧೈರ್ಯ, ಸ್ಥೈರ್ಯ ಕೂಡ ನಮ್ಮ ಸಾಹಿತ್ಯ ಪರಂಪರೆಯ ಅಂತಃಶಕ್ತಿಯೇ. ಕಾಲಮಾನಕ್ಕನುಗುಣವಾಗಿ ಭಾಷೆ ಕುರಿತು ಚರ್ಚೆ ಮಾಡಿದ್ದಾರೆ.

**ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ:**

ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಗಮನಿಸಿದಾಗ ಕನ್ನಡಿಗರನ್ನು ಒಗ್ಗೂಡಿಸುವುದು, ವಿವಿಧ ವಸ್ತು ಆಧರಿಸಿ ಸ್ವತಂತ್ರ ಕೃತಿ ರಚಿಸುವುದು, ಪಾರಿಭಾಷಿಕ ಪದಕೋಶ ಸಿದ್ಧಪಡಿಸುವುದು, ಕೃತಿಕಾರ–ಸಹೃದಯರ ನಡುವೆ ಸಂವಾದ ನಡೆಸಲು ನಿಯತಕಾಲಿಕೆಗಳನ್ನು ಪ್ರಕಟಿಸುವುದು, ಪ್ರಾಚೀನ ಕಾವ್ಯಗಳನ್ನು ಶೋಧಿಸಿ, ಪರಿಷ್ಕರಿಸಿ ಪ್ರಕಟಿಸುವುದು ಹೀಗೆ ಮೊದಲಾದ ಸಾಹಿತ್ಯಿಕ ವಿಷಯಗಳಿಗೆ ಒತ್ತು ಕೊಡಲಾಯಿತು. ಈ ಕಾರ್ಯಗಳ ಜೊತೆಗೆ ಶಾಲೆಗಳಲ್ಲಿ ಶಿಕ್ಷಣ ಪದ್ಧತಿ ಪ್ರಚಾರಕ್ಕೆ ಬರಬೇಕು. ಅದಕ್ಕೆ ತಕ್ಕ ಪಠ್ಯಗಳನ್ನು ತಜ್ಞರಿಂದ ಬರೆಯಿಸಬೇಕು, ಕನ್ನಡ ಶಾಲೆಗಳಿಲ್ಲದ ಕನ್ನಡ ಪ್ರದೇಶಗಳಲ್ಲಿ ಕನ್ನಡ ಶಾಲೆ ಆರಂಭಿಸಬೇಕು, ಅಂಚೆ ಇಲಾಖೆ, ರೈಲ್ವೆ ಇಲಾಖೆ, ಸರ್ಕಾರಿ ಕೋರ್ಟ್ ಕಚೇರಿಗಳಲ್ಲಿ ಕನ್ನಡ ಬಳಸುವಂತೆ ಒತ್ತಾಯಿಸಬೇಕು. ನಮ್ಮ ಎಲ್ಲಾ ವ್ಯವಹಾರಗಳು ಕನ್ನಡದಲ್ಲಿಯೇ ನಡೆಯಬೇಕು, ಹರಿದು ಹಂಚಿ ಹೋದ

ಕರ್ನಾಟಕವನ್ನು ಒಂದು ಮಾಡಬೇಕು ಎನ್ನುವ ನಿರ್ಣಯಗಳ ಮೂಲಕ ಕನ್ನಡ ಬೆಳವಣಿಗೆಯ ಕಾರ್ಯಗಳನ್ನು ಕುರಿತು ಚರ್ಚಿಸಿದ್ದಾರೆ.

**ಸ್ವಾತಂತ್ರ್ಯೋತ್ತರ ಅವಧಿಯಲ್ಲಿ:**

ಈ ಅವಧಿಯಲ್ಲಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮುಖ್ಯ ಪಾತ್ರ ವಹಿಸಿದ ಕನ್ನಡ ಸಾಹಿತ್ಯ ಪರಿಷತ್ತು, ಅಖಂಡ ಕರ್ನಾಟಕ ಪರಿಕಲ್ಪನೆ ರೂಪುಗೊಳ್ಳಲು ಸಾಕಷ್ಟು ಕಾರ್ಯಗಳನ್ನು ನಿರ್ವಹಿಸಿತು. ಆಡಳಿತ ಭಾಷಾ ಚಳುವಳಿ, ಇಂಗ್ಲಿಷ್–ಹಿಂದಿ ವಿರೋಧ ಚಳುವಳಿ, ಕರ್ನಾಟಕ ನಾಮಕರಣ ಚಳುವಳಿ, ಬೆಂಗಳೂರು ದೂರದರ್ಶನ ಉರ್ದು ವಾರ್ತೆ ನಿಷೇಧ ಚಳುವಳಿ, ನದಿ ನೀರಿನ ಬಳಕೆ ಚಳುವಳಿ, ಗೋಕಾಕ ಚಳುವಳಿ, ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಕನ್ನಡ ಚಳವಳಿ, ಸಾಕ್ಷರತಾ ಆಂದೋಲನ, ಮಹಾಜನ ವರದಿ ಜಾರಿ, ಶಾಸನ ಸಭೆಯಲ್ಲಿ ಪರಿಷತ್ತಿನ ಪ್ರತಿನಿಧಿ–ಬರಹಗಾರರಿಗೆ ಅವಕಾಶ ಹೀಗೆ ಕಾಲಕಾಲಕ್ಕೆ ಅನೇಕ ಚಳುವಳಿಗಳಲ್ಲಿ ತನ್ನನ್ನು ತೊಡಗಿಕೊಂಡು ಸಮಸ್ತ ಕನ್ನಡಿಗರ ಧ್ವನಿಯಾದ ಪರಿಷತ್ತಿನ ಕುರಿತು ಮತ್ತು ಆ ಕಾಲದ ಭಾಷಿಕ ಸಮಸ್ಯೆ ಮತ್ತು ಸವಾಲುಗಳನ್ನು ಅಧ್ಯಕ್ಷೀಯ ಭಾಷಣಗಳಲ್ಲಿ ಚರ್ಚಿತವಾಗಿವೆ.

**ಕರ್ನಾಟಕ ಏಕೀಕರಣ ನಂತರದ ಅವಧಿ:**

1. ಕನ್ನಡಿಗರಲ್ಲಿ ರಾಷ್ಟ್ರೀಯ ಭಾವನೆಯನ್ನು ಪ್ರೇರೇಪಿಸಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಪ್ರಚೋದಿಸಿದ್ದು.
2. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಉತ್ಕಟವಾಗಿ ತೊಡಗಿಕೊಂಡು ಅದು ಸಾಕಾರಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸುವ ಕುರಿತು.
3. ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣ ಮಾಡಲು ಒತ್ತಾಯಿಸಿದ್ದು.
4. ರಾಜ್ಯಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಗುವಂತೆ ಹೋರಾಟ ನಡೆಸಿದ್ದು.
5. ಕನ್ನಡ ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿದ ಕಾವ್ಯ–ಜಾಣ–ರತ್ನ ಪರೀಕ್ಷೆ, ಗಮಕ ಪ್ರವೇಶ ಮತ್ತು ಪ್ರೌಢ ಪರೀಕ್ಷೆಗಳನ್ನು, ಜಾನಪದ ಹಾಗೂ ಮಾನವಶಾಸ್ತ್ರ ಪರೀಕ್ಷೆಗಳನ್ನು ವ್ಯವಸ್ಥೆಗೊಳಿಸಿ ನಡೆಸಿದ್ದು.
6. ಮಹಾಜನ ವರದಿ ಜಾರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರಿದ್ದು. ರಾಜ್ಯದ ನೆಲ–ಜಲಗಳ, ಕನ್ನಡ ನುಡಿಯ ಪ್ರಶ್ನೆ ಬಂದಾಗಲೆಲ್ಲ ರಾಜ್ಯದ ಸಮಷ್ಟಿ ಪರವಾಗಿ ನಿಂತು ಹೋರಾಡಿದ್ದು. ರಾಜ್ಯಕ್ಕೆ ಹಿತವಾಗುವಂತೆ ಸರ್ಕಾರಗಳನ್ನು ಒತ್ತಾಯಿಸುವುದು.

7. ಕನ್ನಡಿಗರಲ್ಲಿ ನಾಡು–ನುಡಿ–ಸಂಸ್ಕೃತಿ ಪ್ರೀತಿ ಅಭಿಮಾನಗಳನ್ನು ವೃದ್ಧಿಸಿದ್ದು.
8. ಬೃಹತ್ ಕನ್ನಡ–ಕನ್ನಡ ನಿಘಂಟು ಯೋಜನೆಯನ್ನು ಯಶಸ್ವಿಯಾಗಿ ಪೂರೈಸಿದ್ದು.
9. ಕರ್ನಾಟಕದ ಒಳಗೆ ಹೊರಗೆ ತಾನೊಂದು ಕನ್ನಡ ಸಂಸ್ಕೃತಿಯ, ಕನ್ನಡ ಜನರ ಅಧಿಕೃತ ರಾಯಭಾರಿ ಎಂಬ ಭಾವನೆಯನ್ನು ಎಲ್ಲರಲ್ಲೂ ಉಂಟು ಮಾಡುವ ಕೆಲಸವನ್ನು ಭಾಷಣಗಳು ಮಾಡಿವೆ.

**ಪರಾಮರ್ಶನ ಗ್ರಂಥಗಳು:**


1. ಮುಗುಳಿ ರಂ.ಶ್ರೀ. (ಸಂ), (1970), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಮುಗುಳಿ ರಂ.ಶ್ರೀ. (ಸಂ), (1972), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 2, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಮುಗುಳಿ ರಂ.ಶ್ರೀ. (ಸಂ), (1972), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 3, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ಹಂಪ ನಾಗರಾಜಯ್ಯ (ಸಂ), (1985), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 4, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
5. ಚನ್ನಬಸಪ್ಪ ಗೊ.ರು. (ಸಂ), (1995), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 5, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಧರ್ಮದರ್ಶಿ ಹರಿಕೃಷ್ಣ ಪುನರೂರು (ಸಂ), (2003), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 6, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7. ಅಶ್ವತ್ಥ ನಾರಾಯಣ ಜಿ. (ಸಂ), (2006), ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಸಂಪುಟ – 7, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
8. ಗವಿಮಠ ಬಿ.ಎಸ್., (2011), ಬೆಳಗಾವಿ ಕನ್ನಡ–ಕನ್ನಡಿಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
9. ಗೀತಾಚಾರ್ಯ ನಾ., (2013), ಶಾಸ್ತ್ರೀಯ ಕನ್ನಡ ಪರಿಚಯ, ಶಾಸ್ತ್ರೀಯ ಕನ್ನಡ ವೇದಿಕೆ, ಬೆಂಗಳೂರು.

10. ಗುರುಪಾದಪ್ಪ ಮರಿಗುದ್ದಿ(ಸಂ), (2014), ತೇರನೆಳೆವ ಜನ, ಕನ್ನಡ ಜಾಗೃತಿ ಪುಸ್ತಕ ಮಾಲೆ, ಚಿಕ್ಕೋಡಿ.
11. ಗೋವಿಂದರಾಜು ಸಿ.ಆರ್., (1999), ಕನ್ನಡ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
12. ಗೋವಿಂದರಾಜ ಸಿ.ಆರ್., (2006), ಗೋಕಾಕ ವರದಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
13. ಚಂದ್ರಶೇಖರ ಪಾಟೀಲ್, (2005), ಚಂಪಾದಕೀಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
14. ಚಂದ್ರಶೇಖರ ರಾ.ನಂ.(ಸಂ), (2014), ಕನ್ನಡದ ವಿರಸೇನಾನಿ ಮ.ರಾಮಮೂರ್ತಿ ಅವರ ನಾಡು–ನುಡಿ ಚಿಂತನೆ, ಅಂಕಿತ ಪುಸ್ತಕ, ಬೆಂಗಳೂರು.
15. ಚಂದ್ರಶೇಖರ ರಾ.ನಂ., (2017), ಕನ್ನಡವೆನ್ನಿ ಜೊತೆಯಲ್ಲಿ ಬನ್ನಿ, ಸಪ್ನ ಬುಕ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.